ಬೆಳ್ಳೀ ಬಾಬತು ನಗಗಳು.

46. ಕಾಲಸರ ಗೆಜ್ಜೆ ಸಮೇತ ಯಿದ್ದ ಜೊತೆ 2ಕ್ಕೆ	75	0	0
47. ಪಾವಗದ ಜೊತೆ	20	0	0
48. ಹುಡಗರು ಹಾಕಿಕೊಳ್ಳುವ ಗೆಜ್ಜೆ ಪಾವಗದ ಜೊತೆ 1 ಮುಂಪಾತಗ ಜೊತೆ 1 ಗೆಜ್ಜೆ ಸಹಾ	24	0	0
49. ಗಂಡಸರು ಹಾಕುವ ಡಾಬು 2 ತೂಕ ಗೊ[illegible]	72	0	0
50. ವೊಡದಾರ 2, ಪೈಕಿ ಹದಿನಾರು ರೂಪಾಯಿ ತೂಕದ್ದು 1, ಹದಿನಾಲ್ಕು ರೂಪಾಯಿ ತೂಕದ್ದು 1, ಜೋಡು ಯಳೆ ಬಾಬತು.	30	0	0
51. ಬೆಳ್ಳೀ ಮುಲಾಮು ಪಂಚಪಾತ್ರೆ 1 ದೋಣಿ 1 ಪಂಚಪಾತ್ರೆ ತೂಕ 16, ದೋಣಿ ತೂಕ 6	22	0	0
52. ಸಣ್ಣ ಹುಡಗರಿಗೆ ಹಾಕುವ ಬೆಳ್ಳೀ ಸರಪಣಿ 1, ತೂಕ 24 ರೂಪಾಯಿ ಸಣ್ಣ ಗಂಟೆ 2 ಸರಪಣಿಗೆ ಯಿದ್ದದ್ದು.	24	0	0
53. ಗಿಡ್ಡ ಕುಂಪಣಿ ರೂಪಾಯಿ ರಾಜಾ ರೂಪಾಯಿ ಕೂಡ 50	50	0	0
54. ಸರಕಾರದ ಹಣವಿಗೋಸ್ಕರ ಕೆಂಪು ಗೀರಿನ ಪಂಚೆಯಲ್ಲಿ ಕಟ್ಟಿ ಹಿತ್ತಾಳೆ ತಪ್ಪಲೆಯಲ್ಲಿ ಯಿಟ್ಟಿದ್ದು ಪಂಚೆ ಹಿತ್ತಾಳೆ ತಪ್ಪಲೆ ಸಮೇತ.	500	0	0
55. ಬೆಳ್ಳೀ ಜಡೆಹುವ್ವು ಜೊತೆ 2 ತೂಕ ಹುವ್ವು 14ಕ್ಕೆ ಮೇಲೆ ಭಂಗಾರದ ಕುಸರಿ ಹಚ್ಚಿದೆ	30	0	0

ಬಟ್ಟೆ ಮತ್ತು ಕಾಗದ ಪತ್ರಗಳು ಸುಟ್ಟು ಹೋದ ಬಾಬತು.

56. ಮಡಿ 2, ಸೀರೆ 2, ಪಟ್ಟೆ ಚವಕ 1, ಕೆಲವು ಕಾಗದ ಪತ್ರಗಳು 'ಈ ಮೇರಿಗೆ ಕಳ್ಳರು ಬಿಟ್ಟು ಬಿಟ್ಟಿದ್ದಾರೆಂತಲೂ, ಜ್ಞಾಪಕ ಯಿದ್ದ ಮಟ್ಟಿಗೆ ಮಾಲುಗಳು ಬರಸಿದೇನೆಂತಲೂ ಫಿರ್ಯಾದಿ ಸುಬ್ಬರಾಯ ಹೇಳುತ್ತಾನೆ.

ಜುಮ್ಲಾ	4,076	0	0

ನೋಟೀಸ್.

ಈ ಮೇಲ್ಕಂಡ ಮಾಲ್ ಯಾರು ಪತ್ತೆಗೆ ತರುತ್ತಾರೊ ಅವರಿಗೆ ಶೇಕಡಾ 100 ರೂಪಾಯಿ ಮಾಲಿಗೆ 10 ರೂಪಾಯಿನಂತೆ ಇನ್ನಾಂ ಕೊಡುವದಾಗಿ ಫಿರ್ಯಾದಿ ಸುಬ್ಬರಾಯ ವಪ್ಪಿ ಅರ್ಜೀ ಬರದುಕೊಂಡಿದ್ದಾನೆ.

ಸೈದ್ ನಸಿರುದ್ದೀನ್,
ಫಾರ್ ಡೆಪ್ಯುಟಿ ಕಮ್ಮಿಷನರ್,

ತಾರೀಖು 1ನೇ ಜನವರೀ 1885.

ಇದರಿಂದ ತಿಳಿಸುವದೇನಂದರೆ, ಶಿವಮೊಗ್ಗಾ ಜೈಲಿನಲ್ಲಿ ಕೈದು ಮಾಡಲ್ಪಟ್ಟಿರುವ ಕೈದಿಗಳ ಉಪಯೋಗದ ಬಗ್ಗೆ ಸನ್ 1885ನೇ ಇಸವಿ ಏಪ್ರೈಲ್ ಗುರ್ರೇ ತಾರೀಖು ಮೊದಲು 1886ನೇ ಮಾರ್ಚೀ 31ನೇ ತಾರೀಖುವರಿಗೆ ಎರಡು ದಿನಗಳೂ ಸೇರಿ ಬೇಕಾದ ಆಹಾರ ವಗೈರೇ ದರೋಬಸ್ತು ಜಿನಸುಗಳನ್ನೂ ಕಂಟ್ರಾಕ್ಟು ಮೂಲಕ ಸರಬರಾಯಿ ಮಾಡುವ ಬಗ್ಗೆ ಬರುವ ಬಂದು ಮಾಡಲ್ಪಟ್ಟ ದರಖಾಸ್ತುಗಳನ್ನು ಶಿವಮೊಗ್ಗಾ ಜೈಲ್ ಸೂಪರಿಂಟೆಂಡೆಂಟರವರು, ಜೈಲ್‌ಗಳ ಇನ್ಸ್ಪೆಕ್ಟರ್ ಜನರಲ್ಲವರಿಂದ ಕಾಯಂ ಮಾಡಲ್ಪಡಲಿಕ್ಕೆ ಗುರಿಯಾಗಿ ಸನ್ 1885ನೇ ಇಸವಿ ಮಾರ್ಚೀ 1ನೇ ತಾರೀಖು ವರಿಗೆ ತೆಗದುಕೊಳ್ಳುವರು.

2. ಸದರೀ ತಾರೀಖು ತರುವಾಯ ಯಾವ ದರಖಾಸ್ತುಗಳೂ ತೆಗದುಕೊಳ್ಳಲ್ಪಡುವದಿಲ್ಲ.

3. "ಶಿವಮೊಗ್ಗಾ ಜೈಲಿಗಾಗಿ ಆಹಾರ ಪದಾರ್ಥಗಳ ಸರಬರಾಯಿ ಬಗ್ಗೆ ದರಖಾಸ್ತುಗಳು" ಯಂಬದಾಗಿ ದರಖಾಸ್ತುಗಳ ಮೇಲೆ ಬರದು ಕಳುಹಿಸತಕ್ಕದ್ದು.

4. 500 ರೂಪಾಯಿಗಳು ನಗದಾಗಿ ಅಥವಾ ಕರೆನ್ಸೀ ನೋಟುಗಳ ಮೂಲಕ ಡಿಪಾಜಿಟನ್ನೀ ಕಳುಹಿಸಲ್ಪಟ್ಟ ಹೊರ್ತು ಯಾವ ದರಖಾಸ್ತುಗಳೂ ತೆಗದುಕೊಳ್ಳಲ್ಪಡಲಾರವು.

5. ದರಖಾಸ್ತುಗಳು ಶಿವಮೊಗ್ಗಾ ಡಿಸ್ಟ್ರಿಕ್ಟು ಜೈಲ್ ಆಫೀಸಿನಲ್ಲಿ, ಹಾಜರಾಗಲಿಕ್ಕೆ ಇಷ್ಟವುಳ್ಳ ದರಖಾಸ್ತುದಾರರ ರೂಬರೂ ಮೇಲ್ಕಂಡ ತಾರೀಖಿನೊಳಗೆ ಶಿವಮೊಗ್ಗಾ ಡಿಸ್ಟ್ರಿಕ್ಟು ಜೈಲ್ ಸೂಪರಿಂಟೆಂಡೆಂಟರವರಿಂದ ಖುಲ್ಲಾ ಮಾಡಲ್ಪಡುವವು.

6. ದರೋಬಸ್ತು ದರಖಾಸ್ತುಗಳಲ್ಲಿಯೂ, ಈ ಕೆಳಗೆ ನಮೂದಿಸುವ ಬಗೆಯ ಪ್ರತಿ ಕೈದಿಗೂ ದಿನ ಒಂದಕ್ಕೆ ಆಗತಕ್ಕ ದರವು ನಮೂದಿಸಲ್ಪಡತಕ್ಕದ್ದು.

				ರೂ.	ಆ.	ಪೈ.
ನೇಟಿವ ಕೂಲಿಯವರಾದ ಗಂಡಸರಿಗೆ A ಕ್ಲಾಸ		..	..			
ಡಿಟ್ಟೋ	ಡಿಟ್ಟೋ B ,,	..	..			
ಡಿಟ್ಟೋ	ಡಿಟ್ಟೋ C ,,	..	..			
ಹುಡುಗರಾದ ಖೈದಿಗಳು		..	..			
ನೇಟಿವ ಕೂಲೀ ಮಾಡದ ಗಂಡಸರು, ಹೆಂಗಸರು, ವಿಚಾರಣೆಯಲ್ಲಿ ಇರತಕ್ಕವರು, D ಕ್ಲಾಸ						
ಯೂರೋಪಿಯನ್ನರುಗಳು ವ ಈಸ್ಟ ಇಂಡಿಯನ್ನರುಗಳು		..	..			

7. ದರಖಾಸ್ತು ಮಾಡಲ್ಪಟ್ಟ ದರಗಳು ಆಹಾರ ದಿನಸೀಗಳ ಸ್ಕೇಲ್ ಪಟ್ಟಿಯಲ್ಲಿ ನಮೂದಿರುವ ಪದಾರ್ಥಗಳು ಮಾತ್ರವಲ್ಲದೆ ಆಸ್ಪತ್ರಿ ಆಹಾರ ಪದಾರ್ಥಗಳು, ಕಾಹಿಲೇ ಮನುಷ್ಯರಿಗೆ ವಿಶೇಷ ಪದಾರ್ಥಗಳು, ನಷ್ಟವಾಗತಕ್ಕ ಪದಾರ್ಥಗಳು, ದೀಪದ ಯಂತೆ ಲಾಂದ್ರಗಳು, ಮತ್ತು ಅವುಗಳ ರಿಪೇರಿ ಮಾಡಿಸುವದು, ಸ್ನಾನ ಮಾಡಲಿಕ್ಕೆ ಸೀಗೇಕಾಯಿ, ತಮಾಂ ತಾಂಬ್ರ ಪಾತ್ರೆಗಳ ರಿಪೇರಿ ವ ಕಲಾಯಿ, ಪರಕೆಗಳು, ಗೂಡೆ ಚಾಪೆ ಮಾಡಲಿಕ್ಕೆ ಬಿದುರು, ಮಡಿಕೆ ಸುಡುವದಕ್ಕೆ ಸೌದೆ, ಹೆಣ್ಣು ಖೈದೀರ ಮಕ್ಕಳಿಗೆ ಬೇಕಾದ ಹಾಲು, ರೊಟ್ಟಿ ಸಕ್ಕರೆ ವಗೈರೇ ಪದಾರ್ಥಗಳು, ಹೊಗೆ ಹಾಕುವದಕ್ಕೆ ಗಂಧಕ, ಚವಳುಮಣ್ಣು, ಮತ್ತು ಬಟ್ಟೆ ಸಿವಾಯಿ ಖೈದಿಗಳ ಉಪಯೋಗದ ಬಗ್ಯೆ ಕ್ರಮವಾಗಿ ಕೊಡಬೇಕಾದ ತಮಾಂ ಚಿಲ್ಲರೇ ಪದಾರ್ಥಗಳೂ ಸಹ ಅಡಗಿರತಕ್ಕದ್ದು.

8. ಸೂಪರಿಂಟೆಂಡೆಂಟರವರು ಯಾವ ದರಖಾಸ್ತನ್ನಾಗಲಿ ತಿರಸ್ಕರಿಸುವ ಸ್ವಾತಂತ್ರ್ಯವನ್ನು ತಮ್ಮಲ್ಲಿ ಉಳಿಸಿಕೊಂಡಿರುತ್ತಾರೆ, ಹೀಗೆ ತಿರಸ್ಕರಿಸಲಿಕ್ಕೆ ಯಾವ ನಿಮಿತ್ತವನ್ನೂ ಅವರು ತಿಳಿಸಬೇಕಾದ್ದಿಲ್ಲ.

9. ಮಂಜೂರಾದ ದರಖಾಸ್ತುದಾರನ ಡಿಪಾಜಿಟ ಮೊಬಲಗು ನಿಲ್ಲಿಸಿಕೊಳ್ಳಲ್ಪಟ್ಟು ಆತನು ಕಂಟ್ರಾಕ್ಟು ಮುಚ್ಚಳಿಕೆ ಬರೆದು ಕೊಡಲಿಕ್ಕಾಗಲಿ, ನಗದಾದರೂ ಗವರ್ನಮೆಂಟ ಪತ್ರಗಳ ಮೂಲಕವಾದರೂ 1,000 ರೂಪಾಯಿಗಳ ಮೊಬಲಗಿಗೆ ಜಾಮೀನನ್ನು ತನ್ನ ದರಖಾಸ್ತು ಮಂಜೂರಾದ ಸಂಗತಿ ತನಗೆ ತಿಳಿಸಲ್ಪಟ್ಟ ತಾರೀಖು ಮೊದಲು ಒಂದು ವಾರದ ವಳಗಾಗಿ, ಕೊಡಲಿಕ್ಕಾಗಲಿ ತಪ್ಪಿದರೆ, ಸರಕಾರಕ್ಕೆ ಸೇರಿಸಿ ಕೊಳ್ಳಲ್ಪಡುವದು.

10. ಕಂಟ್ರಾಕ್ಟದಾರನಿಗೆ ನಗದು ಅಡ್ವಾನ್ಸು ಯಾವದೂ ಕೊಡಲ್ಪಡಲಾರದು. ಸರಬರಾಯಿ ಮಾಡಲ್ಪಟ್ಟ ಪದಾರ್ಥಗಳಿಗೆ ಪ್ರತಿ ತಿಂಗಳು 1ನೇ ತಾರೀಖಿಗೆ ತರುವಾಯ ಸಾಧ್ಯವಾದಷ್ಟು ತ್ವರೆಯಾಗಿ ಶಿವಮೊಗ್ಗಾ ಜೈಲ ಸೂಪರಿಂಟೆಂಡೆಂಟರವರಿಂದ ಮೊಬಲಗು ಕೊಡಲ್ಪಡುವದು.

11. ಕಂಟ್ರಾಕ್ಟದಾರನಿಗೆ ಸಾಮಾನುಗಳ ಬಗ್ಯೆ ಒಂದು ಕೋಠಿಯು ಬಿಡಲ್ಪಡುವದು, ಅದರಲ್ಲಿ ಆತನು ನಷ್ಟವಾಗದ ದರೋಬಸ್ತು ಪದಾರ್ಥಗಳನ್ನೂ ಇಟ್ಟುಕೊಳ್ಳಬಹುದು. ಮಾಂಸ ವಗೈರೇ ನಷ್ಟವಾಗುವ ಪದಾರ್ಥಗಳು ಪ್ರತಿ ದಿನ ಬೆಳಿಗ್ಯೆ 7¼ ಘಂಟೆಗೆ ಜೈಲನಲ್ಲಿ ಇರತಕ್ಕದ್ದು.

12. ಕಂಟ್ರಾಕ್ಟು ವಳ ಶಿಕ್ಮಿಗೆ ಕೊಡಲ್ಪಡಕೂಡದು.

13. ಕಂಟ್ರಾಕ್ಟದಾರನಿಂದ ಸರಬರಾಯಿ ಮಾಡಲ್ಪಡುವ ಅಕ್ಕಿ, ರಾಗಿ, ತೊಗರೀಬೇಳೆ ಯಿವುಗಳು ಮಾಡಲ್ಪಟ್ಟು ಕಲ್ಲು ಮಣ್ಣು ಯಿಲ್ಲದೆಯು ಇರತಕ್ಕದ್ದು; ಮೆಣಸಿನಕಾಯಿಯ ತಮಾಂ ತುಂಬುಗಳನ್ನು, ಹುಣಿಸೆ ಹಣ್ಣಿನ ನಾರು ಮತ್ತು ಬೀಜಗಳನ್ನು ಜೈಲಿಗೆ ಸರಬರಾಯಿ ಮಾಡುವದಕ್ಕೆ ಪೂರ್ವವೇ ತೆಗೆದು ಹಾಕತಕ್ಕದ್ದು.

14. ಕಂಟ್ರಾಕ್ಟಿನ ನಿಬಂಧನೆಗೆ ತಪ್ಪಿ ನಡೆಯುವ ಬಗ್ಯಾಗಲಿ, ಕೀಳು ತರದ ಯಾವ ಪದಾರ್ಥಗಳನ್ನು ಕೊಡುವ ಬಗ್ಯಾಗಲಿ, ಶಿವಮೊಗ್ಗಾ ಜೈಲ ಸೂಪರಿಂಟೆಂಡೆಂಟರವರ ಮರ್ಜಿಯಿಂದ 50 ರೂಪಾಯಿಗೆ ಮೀರದ ಒಂದು ಜುರ್ಮಾನೆಯು ಹಾಕಲ್ಪಡುವದು, [illegible] ಮೇಲ ತಪ್ಪಿಗೆ ಕಂಟ್ರಾಕ್ಟು ರದ್ದು ಮಾಡಲ್ಪಟ್ಟು ಜಾಮೀನ ಮೊಬಲಗು ಸರಕಾರಕ್ಕೆ ಸೇರಿಸಿಕೊಳ್ಳಲ್ಪಡುವದು.

15. ಕಂಟ್ರಾಕ್ಟು ಬಗ್ಗೆ ನಡೆಯುವ ದರೋಬಸ್ತು ಸಂಗತಿಗಳೊಳಗೂ ಶಿವಮೊಗ್ಗಾ ಜೈಲ ಸೂಪರಿಂಟೆಂಡೆಂಟರವರ ನಿರ್ಣಯವೇ ಅಖೈರಾಗಿರತಕ್ಕದ್ದು.

16. ಕಂಟ್ರಾಕ್ಟದಾರನು ಖೈದಿಗಳ [illegible] ತರಕಾರಿಗಳನ್ನು ವರ ಮಾನಿಗೆ 4 ಕಾಸುಗಳ ಮೇಲೆ ಖಾಯಂ ದರದ ಪ್ರಕಾರ ಜೈಲ ತೋಟದಿಂದಲೇ ಕೊಳ್ಳುವದಕ್ಕೆ ಬದ್ಧನಾಗಿರತಕ್ಕದ್ದು.

17. ಇನ್ಯಾವ ಸಂಗತಿಯನ್ನಾದರೂ ತಿಳಿಯಬೇಕಾದರೆ ಜೈಲ ಸೂಪರಿಂಟೆಂಡೆಂಟರವರನ್ನು ಕೇಳಿ ತಿಳಿದುಕೊಳ್ಳಬಹುದು.

18. ಅಡಿಗೆ ಮಾಡುವಲ್ಲಿ ಖೈದಿಗಳು ವಗೈರೆ [illegible]ದಿಂದ ಆಹಾರವೇನಾದರೂ ಅಕಸ್ಮಾತ್ ನಷ್ಟವಾದರೆ ಅದರ ಲುಕ್ಸಾನನ್ನು ಕಂಟ್ರಾಕ್ಟುದಾರನೇ ಕಟ್ಟಿಕೊಡತಕ್ಕದ್ದು.

19. ಹಾಲೀ ಶಿವಮೊಗ್ಗಾ ಜೈಲನಲ್ಲಿ 225 ಮಂದಿ ಖೈದೀಇದ್ದಾರೆ, ಈ ಸಾಲಿನಲ್ಲಿ ಷುಮಾರ್ 250 ವರಿಗೆ ಜಾಸ್ತೀಯಾಗಬಹುದಾಗಿ ಅಂದಾಜ್ ಯಿರುತ್ತೆ.

20. ಆಹಾರ ತರದ ಪಟ್ಟಿಯನ್ನು 1880ನೇ ಇಸವಿ ಜನವರೀ 10ನೇ ಮುದ್ಕುಮಿನ ಮೈಸೂರು ಗೆಜೆಟ್ಟಿನಿಂದಾಗಲಿ, ಶಿವಮೊಗ್ಗಾ ಜೈಲ್ ಸೂಪರಿಂಟೆಂಡೆಂಟರವರನ್ನು ಕೇಳಿ ಆಗಲಿ ತಿಳಿದುಕೊಳ್ಳಬಹುದು.

ಪಿ. ಪಂಚನಾಥರಾವ್,
ಜೈಲ್ ಸೂಪರಿಂಟೆಂಡೆಂಟ್.

ಕಡೂರು ಡಿಸ್ಟ್ರಿಕ್ಟ್.

ತಾರೀಖು 15ನೇ ಜನವರೀ 1885.

ಇದರಿಂದ ಸರ್ವರ ತಿಳುವಳಿಕೆ ಬಗ್ಗೆ ಪ್ರಕಟಪಡಿಸುವದೇನಂದರೆ, ಕಡೂರು ಡಿಸ್ಟ್ರಿಕ್ಟ್ ತರೀಕೆರೆ ತಾಲ್ಲೂಕು ಕಾರ್ಮದುರ್ಗಕ್ಕೆ ಸೇರಿದ 180 ಯಾಕರೆ ವಿಸ್ತೀರ್ಣವುಳ್ಳ ಪೂರಾ 6ನೇ ಸರ್ವೇ ನಂಬರ್ ಬೀಳು ಜಮೀನಿಗೆ ಕಾಫಿ ಸಾಗುವಳೀ ಬಗ್ಗೆ ದರಖಾಸ್ತು ಬಂದಿರುವದರಿಂದ ಸದರೀ ಜಮೀನು 1885ನೇ ಇಸವಿ ಫೆಬ್ರುವರೀ 20ನೇ ಮುದ್ಕುಮಿನಲ್ಲಿ ತರೀಕೆರೆ ತಾಲ್ಲೂಕು ಅಮಲ್‌ದಾರರ ರೂಬರೂ ತರೀಕೆರೆ ಮೊಕ್ಕಾಮಿನಲ್ಲಿ, ಐಯಿಂದ ಸದರೀ ಜಮೀನಿಗೆ ಮೊಕರರ್ ಮಾಡಲ್ಪಡುವ ಕಂದಾಯ ತೆರುವದಕ್ಕೂ, ಯಾವದಾದರೂ ನೀರು ವುಳಿಸಿಕೊಳ್ಳುವದರ ಮತ್ತು ಆವಶ್ಯಕವಾದ ಯಾವದಾದರೂ ಮಾರ್ಗದ ಹಕ್ಕುದಾರಿಗೂ ವಳಪಟ್ಟು, ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ.

2. ಕ್ರಯದಾರನು ಹರಾಜು ಖೈದಾದ ಕೂಡಲೇ ಕ್ರಯದ ಮೊಬಲಗ್ ಪೈಕೀ ಶೇಕಡಾ 25ರಂತೆ ಆಗುವ ಮೊಬಲಗನ್ನು ಡಿಪಾಜಿಟ್ ಯಿಡತಕ್ಕ[illegible]. ಬಾಕಿ ಕ್ರಯದ ಮೊಬಲಗನ್ನು ಹರಾಜು ತಾರೀಖು ಲಾಗಾಯತು 15 ದಿವಸಗಳ ವಳಗಾಗಿ ಪಾವತೀ ಮಾಡದೆ ಯಿದ್ದಲ್ಲಿ ಮೊದಲು ಡಿಪಾಜಿಟ್ ಯಿಡಲ್ಪಟ್ಟ ಮೊಬಲಗು ಸರಕಾರಕ್ಕೆ ದಂಡವಾಗಿ ತೆಗೆದುಕೊಳ್ಳಲ್ಪಡುವದು.

3. ಹಾಗೆ ಡಿಪಾಜಿಟ್ ಯಿಡಲ್ಪಡದೆ ಹೋದರೆ ಯಾ ಕ್ರಯದ ಬಾಕೀ ಮೊಬಲಗು ಪಾವತೀ ಮಾಡಲ್ಪಡದೆ ಯಿದ್ದರೆ, ಜಮೀನು ಅವ್ವಲ್ ಕ್ರಯದಾರನ ಖರ್ಚಿಗೂ ಲುಕ್ಸಾನಿಗೂ ವಳಪಟ್ಟು ಪುನಹಾ ಹರಾಜ್ ಹಾಕಲ್ಪಡುವದು.

4. ಜಮೀನಿನ ಹರಾಜು ಡೆಪ್ಯುಟಿ ಕಮ್ಮಿಷನರವರಿಂದ ಕಾಯಂ ಮಾಡಲ್ಪಡುವ ಪರಿಯಂತ ಆಖೈರಾದ್ದಾಗಿರತಕ್ಕದ್ದಲ್ಲವು.

5. ಸದರೀ ಜಮೀನಿನ ಚಕ್ಕುಬಂದಿಯು ಇದರ ಕೆಳಗೆ ಕಾಣಿಸಿರುತ್ತೆ; ಇನ್ನೂ ಜಾಸ್ತಿ ತಪಸೀಲ್‌ಗಳು ಹರಾಜ್ ಕಾಲದಲ್ಲಿ ಕೇಳಿ ತಿಳಿದುಕೊಳ್ಳಬಹುದು. ತಪಸೀಲ್‌ನಲ್ಲಾಗಲಿ ಅಂದಾಜಾ ಬೀಜವರಿ ವಿಷಯದಲ್ಲಾಗಲಿ ಯಿರುವ ಗಲ್ತಾಗಳಿಗೆ ಸರಕಾರದವರು ಜವಾಬ್‌ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

ಉತ್ತರಕ್ಕೆ—ಸರ್ವೇ ನಂಬರ್ 21
ದಕ್ಷಿಣಕ್ಕೆ—ಅತ್ತಿಗೆರೆ ಗ್ರಾಮದ ಜಮೀನು
ಪೂರ್ವಕ್ಕೆ—ಸಂತವೇರಿಯಿಂದ ಚಿಕ್ಕಮಗಳೂರಿಗೆ ಹೋಗುವ ರಸ್ತೆ
ಪಶ್ಚಿಮಕ್ಕೆ—ಸರ್ವೇ ನಂಬರ್ 5

ಮಹಮ್ಮದ್ ಅಲ್ಲಿ, ಕೆ. ಬಿ.,
ಆಫಿಷಿಯೇಟಿಂಗ್ ಡೆಪ್ಯುಟಿ ಕಮ್ಮಿಷನರ್.

ಸನ್ 1884ನೇ ಇಸವಿ ನವಂಬರ ತಿಂಗಳ ಹಾಲಸ್ಥಿತಿ ರಿಪೋರ್ಟುಗಳು.

ಬೆಂಗಳೂರು ಡಿಸ್ಟ್ರಿಕ್ಟ್.

ಮಳೆ—ಹೆಡ್ ಕ್ವಾರ್ಟರನಲ್ಲಿ 3 ಅಂಗುಲ 47 ಸೆಂಟ್ಸ್ ಮಳೆ ಅಳೆಯಲ್ಪಟ್ಟಿತು. ಡಿಸ್ಟ್ರಿಕ್ಟಿನ ಮಳೆ ಸಾಧಾರಣವಾಗಿ ಆದ ಮಳೆಯಿಂದ ಬೆಳೆಯಲ್ಲಿರುವ ಫಸಲಿಗೆ ವಿಶೇಷ ಮೇಲು ಉಂಟಾಯಿತು.

ಬೆಳೆಯ ಸ್ಥಿತಿ—ಕಾರ್ ಮುಸ್ಕಿ ಫಸಲುಗಳು ಛಂದಾಗಿವೆ, ರಾಗಿ ರೇಟೆ ಕೆಲಸವು ಕೆಲವು ಸ್ಥಳಗಳಲ್ಲಿ ಪ್ರಾರಂಭಿಸಲ್ಪಟ್ಟಿತು.